International Journal of Kannada Research
www.kannadajournal.com

ISSN: 2454–5813
IJKR 2024; 10(3): 23-27
© 2024 IJKR
www.kannadajournal.com
Received: 22-05-2024
Accepted: 26-06-2024

**ವಿಶ್ವನಾಥ ವ ಬೊಂದಾಡೆ**
ಸಂಶೋಧನಾ ಅಭ್ಯರ್ಥಿ,
ಸ್ನಾತಕೊತ್ತರ ಶಿಕ್ಷಣ ಅಧ್ಯಯನ
ವಿಭಾಗ, ಕರ್ನಾಟಕ
ವಿಶ್ವವಿದ್ಯಾಲಯ ಧಾರವಾಡ,
ಕರ್ನಾಟಕ, ಭಾರತ

**ಡಾ. ಸುರೇಶ ಎಸ್ ಸಮ್ಮಸಗಿ**
ಸಂಶೋಧನಾ ಮಾರ್ಗದರ್ಶಕರು,
ಪ್ರಾಧ್ಯಾಪಕರು, ಕರ್ನಾಟಕ
ವಿಶ್ವವಿದ್ಯಾಲಯದ ಶಿಕ್ಷಣ
ಮಹಾವಿದ್ಯಾಲಯ ಧಾರವಾಡ,
ಕರ್ನಾಟಕ, ಭಾರತ

**Corresponding Author:**
**ವಿಶ್ವನಾಥ ವ ಬೊಂದಾಡೆ**
ಸಂಶೋಧನಾ ಅಭ್ಯರ್ಥಿ,
ಸ್ನಾತಕೊತ್ತರ ಶಿಕ್ಷಣ ಅಧ್ಯಯನ
ವಿಭಾಗ, ಕರ್ನಾಟಕ
ವಿಶ್ವವಿದ್ಯಾಲಯ ಧಾರವಾಡ,
ಕರ್ನಾಟಕ, ಭಾರತ

# ಕನ್ನಡ ಜಾನಪದ ಸಾಹಿತ್ಯದಲ್ಲಿ ಶೈಕ್ಷಣಿಕ ಮೌಲ್ಯಗಳ ಅಧ್ಯಯನದ ಪ್ರಸ್ತುತೆ

**ವಿಶ್ವನಾಥ ವ ಬೊಂದಾಡೆ, ಡಾ. ಸುರೇಶ ಎಸ್ ಸಮ್ಮಸಗಿ**

## 1. ಪೀಠಿಕೆ

ಜನಪದವು ಜಾನಪದ ಸಾಹಿತ್ಯ ಪ್ರಪಂಚಕ್ಕೆ ಮಾತ್ರ ಸೀಮಿತವಾಗಿರದೆ ಶಿಕ್ಷಣ ಪ್ರಪಂಚದಲ್ಲಿಯೂ ಅದರ ಸಕ್ರಿಯ ಸೇವೆಯ ಕೈವಾಡವಿರುವುದನ್ನು ಕಾಣಬಹುದು. ಇದು ಅಕ್ಷರಾಭ್ಯಾಸವಿಲ್ಲದವರಿಗೆ ಜ್ಞಾನ ನೀಡುತ್ತಿರುವುದು. ಹಾಗೆಯೆ ಜಗತ್ತಿನಾದ್ಯಂತ ಕಂಡುಬರುವುದು. ಇದು ಒಂದು ಜನಾಂಗದಿಂದ ಇನ್ನೊಂದು ಜನಾಂಗಕ್ಕೆ ಜ್ಞಾನಾನುಭವ, ಸಂಪ್ರದಾಯ, ಜೀವನ ಮೌಲ್ಯಗಳನ್ನು ಉದಾರವಾಗಿ ಕೊಡುವಲ್ಲಿ ಮಾಧ್ಯಮವಾಗಿ ಬಂದಿದೆ. ಹೀಗೆ ಮಾಧ್ಯಮವಾಗಿ ಬಂದು ಕ್ರಿಯಾಶೀಲ ಪಾತ್ರವಹಿಸಿದಾಗ ಸಂಸ್ಕೃತಿ ಎಂಬುದು ತಾನಾಗಿಯೆ ಮೂಡಿ ಬಂದು ಜನತೆಯ ಆಲಯದಲ್ಲಿ ಏಕರಸವಾಗಿ ಬಿಡುತ್ತದೆ. ಸುಸಂಘಟಿತ ವಿದ್ಯಾಲಯವಿಲ್ಲದ ಶಿಕ್ಷಕರಿಲ್ಲದೆ ನಡೆಯುತ್ತಿರುವ ಈ ಜಾನಪದ ರೀತಿ ವಿಸ್ಮಯಕಾರಕವಾಗಿದೆ. ಜನಪದ ವ್ಯಕ್ತಿಗಳು ಮುಖದಿಂದ ಮುಖಕ್ಕೆ ಹರಿದು ವಿದ್ಯೆವಾಹಿನಿ ಅದರಲ್ಲಡಗಿದ ಗಂಭಿರಾರ್ಥ, ಸೆಳೆತ, ಒಲವು ತನ್ನಿಂದ ತಾನಾಗಿ ಒಬ್ಬರಿಂದೊಬ್ಬರಿಗೆ ದೇಣಿಗೆಯಾಗಿ, ಒಬ್ಬರ ಮುಖದಿಂದ ಇನ್ನೊಬ್ಬರ ಮುಖವಾಗಿ ಸುಶ್ರಾವ್ಯವಾಗಿ ಹರಿದ ವಿದ್ಯೆಯಾಗಿದೆ. ಇದು ಯಾವುದೇ ಬಗೆಯ ವ್ಯವಸ್ಥಿತವಾದ ವಿದ್ಯೆಯ ಕೇಂದ್ರಗಳಲ್ಲಿ ಸಂಗ್ರಹಿಸಿ ತದನಂತರ ಅದನ್ನು ಇನ್ನಿತರರಿಗೆ ನೀಡಿದ ಬಗೆಯೆನಲ್ಲ. ಒಬ್ಬರಿಂದೋಬ್ಬರಿಗೆ ಸಲಿಸಾಗಿ ಸಾಗಿಸಿದ ವಿದ್ಯೆ ಜಾನಪದದ ವೈಶಿಷ್ಟ್ಯವಾಗಿದೆ. ಇಲ್ಲಿ ಕಲಿಕೆಯ ಬಗ್ಗೆ ಒತ್ತಾಯವಿಲ್ಲ. ಒತ್ತಾಸೆಯಿಂದಲ್ಲಷ್ಟೇ ಗ್ರಹಿಸಿ ಪುನಃ ಉಚ್ಚರಿಸಿ ಸಾಧಿಸಿ ಪಡೆದ ಸಿದ್ದಿಯಾಗಿದೆ. ಬಹುವಾರ್ಥ ಹೊಂದಿದ ಪದಗಳ ಸಮುಚ್ಚಯವಾದರೂ ಸಲೀಸವಾಗಿ ಇನ್ನಿತರರು ಗ್ರಹಿಸಿ ಪ್ರಚಾರ ಪಡಿಸಿದ ಹಾಗೂ ಅದನ್ನು ಮುಂದುವರಿಯಲು ಅವಕಾಶ ನೀಡಿದ ಜಾನಪದ ವ್ಯಕ್ತಿಗಳು ಬಹು ಪ್ರಭಾವ ಶಾಲಿಯಾದ ಸಾಹಿತ್ಯವಾಗಿದೆ.

## 2. ಸಂಶೋಧನಾ ಸಮಸ್ಯೆಯ ವ್ಯಾಖ್ಯಾನ.

ಪ್ರಸ್ತುತ ಈ ಪ್ರಬಂಧದ ತಲೆಬರಹ "ಕನ್ನಡ ಜನಪದ ಸಾಹಿತ್ಯದಲ್ಲಿ ಶೈಕ್ಷಣಿಕ ಮೌಲ್ಯಗಳು ಹಾಗೂ ಸಮೂದಾಯ ಶಿಕ್ಷಣ ಒಂದು – ಅಧ್ಯಯನ" ಜನಪದಗಳಲ್ಲಿ ಶೈಕ್ಷಣಿಕ ವಿಚಾರಗಳನ್ನು ಒಳಗೊಂಡ ಜೀವನದ ಶ್ರೇಷ್ಠ ಮೌಲ್ಯಗಳನ್ನು ವಿವರಿಸಲಾಗುವುದು. ಈ ಉದ್ದೇಶಕ್ಕಾಗಿ ಜೀವನದಲ್ಲಿ ಜನಪದ ಸಾಹಿತ್ಯದ ಶ್ರೇಷ್ಠ ಮೌಲ್ಯಗಳ ಪ್ರಭಾವ ಸಮೂದಾಯದ ಮೇಲೆ ಒಂದು ಶೈಕ್ಷಣಿಕ ಅಧ್ಯಯನ ಎಂಬ ವಿಷಯವನ್ನು ಸಂಶೋಧನಾ ಅಧ್ಯಯನಕ್ಕಾಗಿ ತೆಗೆದುಕೊಳ್ಳಲಾಗಿದೆ.

## 3. ಅಧ್ಯಯನದ ಪದ್ಧತಿ.

ಪ್ರಸ್ತುತ ಅಧ್ಯಯನದಲ್ಲಿ ವಿಷಯ ವಿಶ್ಲೇಷಣೆಯ ಪದ್ಧತಿಯನ್ನು ಜನಪದ ಸಾಹಿತ್ಯಗಳಲ್ಲಿ ಶೈಕ್ಷಣಿಕ ವಿಚಾರ ಮತ್ತು ಜೀವನ ಶ್ರೇಷ್ಠ ಮೌಲ್ಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಹಾಗೆಯೇ ಅನೇಕ ಜಾನಪದ ಸಾಹಿತ್ಯ ಜ್ಞಾನಿಗಳ ಜೊತೆ ಮುಖಾಮುಖಿ ಚರ್ಚಿಸಿ ಜಾನಪದ ಸಾಹಿತ್ಯದಲ್ಲಿಯ ಶೈಕ್ಷಣಿಕ ಮತ್ತು ಜೀವನ ಮೌಲ್ಯಗಳನ್ನು ಸಂಶೋಧಿಸಿ, ಸಂಗ್ರಹಿಸಿ, ವಿಂಗಡಿಸಿ, ವಿಶ್ಲೇಷಿಸಿ ಪ್ರಸ್ತುತಪಡಿಸಲಾಗಿದೆ. ಒಟ್ಟಾರೆಯಾಗಿ ಇದು ಗ್ರಂಥ ಆಧಾರಿತ ಅಧ್ಯಯನವಾಗಿದೆ.

### 4. ಅಧ್ಯಯನದ ಉದ್ದೇಶಗಳು

- ಜಾನಪದ ಸಾಹಿತ್ಯದಲ್ಲಿ ಶೈಕ್ಷಣಿಕ ವಿಚಾರಗಳನ್ನು ವಿಶ್ಲೇಷಣೆ ಮಾಡುವುದು.
- ಜಾನಪದಗಳಲ್ಲಿ ಕಂಡುಬರುವ ಜ್ಞಾನಕ್ಕೆ ಸಂಬಂಧಿಸಿದ ಅಂಶಗಳನ್ನು ಕುರಿತು ಅಧ್ಯಯನ ಮಾಡುವುದು
- ಜಾನಪದ ಸಾಹಿತ್ಯದಲ್ಲಿನ ಸ್ತ್ರೀ ಶಿಕ್ಷಣ ಕುರಿತು ತಿಳಿಸಿರುವ ವಿಚಾರಗಳ ಬಗ್ಗೆ ಅಧ್ಯಯನ ಮಾಡುವುದು.
- ಜಾನಪದ ಸಾಹಿತ್ಯದಲ್ಲಿನ ಶಿಕ್ಷಣದ ಮುಖಾಂತರ ಯಾವ ರೀತಿ ಮಕ್ಕಳಿಗೆ ಜೀವನದ ಮೌಲ್ಯಗಳನ್ನು ತಿಳಿಸಲು ಸಹಕಾರಿಯಾಗಿದೆ ಎಂಬುದನ್ನು ಅಧ್ಯಯನ ಮಾಡುವುದು.
- ಜಾನಪದ ಸಾಹಿತ್ಯದಲ್ಲಿನ ಶೈಕ್ಷಣಿಕ ಮೌಲ್ಯಗಳನ್ನು ಜನರಿಗೆ ಯಾವ ರೀತಿ ಬೋಧಿಸಲು ಸೂಕ್ತ ಎಂಬುದನ್ನು ಅಧ್ಯಯನ ಮಾಡುವುದು.
- ಜಾನಪದ ಸಾಹಿತ್ಯದಲ್ಲಿನ ಶೈಕ್ಷಣಿಕ ವಿಚಾರ ಹಾಗೂ ಜೀವನ ಮೌಲ್ಯಗಳನ್ನು ಪಠ್ಯ ಪುಸ್ತಕದಲ್ಲಿ ಅಳವಡಿಸುವ ಬಗೆಯನ್ನು ಕುರಿತು ಅಧ್ಯಯನ ಮಾಡುವುದು.

### 5. ಅಧ್ಯಯನದ ಅವಶ್ಯಕತೆ ಮತ್ತು ಮಹತ್ವ

ಸಂಸ್ಕಾರವುಳ್ಳ ಗುಣಗಳ ಮಹತ್ವವನ್ನು ಅರಿತೇ ನಮ್ಮ ಜನಪದರು ವ್ಯಕ್ತಿ ಸಮಾಜದಲ್ಲಿ ಹೇಗೆ ಬಾಳಬೇಕು, ಸಮಾಜದಲ್ಲಿ ತನ್ನ ಪಾತ್ರವೇನು, ಆಚಾರ-ವಿಚಾರಗಳೇನು, ರೀತಿ-ನೀತಿಗಳೇನು? ಸಂಪ್ರದಾಯಗಳೇನು? ಸಮಾಜದ ಇನ್ನಿತರರ ಜೊತೆಗೆ ಪರಸ್ಪರ ಸಹಕಾರ, ಸಹಾನೂಭೂತಿ, ಸೌಹಾರ್ದತೆಯಿಂದ ಹೇಗೆ ವರ್ತಿಸಬೇಕು? ತಂದೆ-ತಾಯಿಗಳ ಸ್ಥಾನಮಾನವೇನು? ಗುರು-ಶಿಷ್ಯರ ಬಾಂಧವ್ಯ ಎಂಥದ್ದು ಎಂಬುದನ್ನು ವ್ಯಕ್ತಿ ಸಮಾಜದಲ್ಲಿ ದೈಹಿಕವಾಗಿ, ಮಾನಸಿಕವಾಗಿ, ಧಾರ್ಮಿಕವಾಗಿ ಹೇಗೆ ಬದುಕಬೇಕು? ಎಂಬುದನ್ನು ಗೀತೆ, ಗಾದೆ, ಕಥೆ, ಒಡಪು, ಒಗಟು, ಕಲೆ ಮುಂತಾದ ಜಾನಪದ ಮುಖ್ಯ ಕವಲುಗಳಲ್ಲಿ ಮೌಲ್ಯ ಶಿಕ್ಷಣವನ್ನು ಮೌಖಿಕ ಪರಂಪರೆಯಲ್ಲಿ ನಿಡುತ್ತಾ ಬಂದಿದ್ದಾರೆ. ಈ ಜಾನಪದವು ಪರ್ಯಾಯವಾಗಿ ಶಿಕ್ಷಣವನ್ನು ಕೊಡುತ್ತ ಬಂದಿರುವುದು ಮಾನವ ಜನಾಂಗದ ಪುಣ್ಯವೇ ಎಂದು ಹೇಳಬಹುದು.

> ಬಾಡದೀ ಹೂ ಹಾಡು ಕಾಡ ಮಲ್ಲಿಗೆಯೆಂದು
> ಕಾಡಗಾಳಿಗಳು ಪರಿಮಳವ ! ಹೊತ್ತೊಯ್ದು
> ನಾಡೊಳಗೆ ಸುಳಿದು ಬೀಸುವವು !!

ಕಾಡ ಮಲ್ಲಿಗೆಯ ರೂಪದಲ್ಲಿ ಜನಪದವಿದ್ದರೂ ಅದರ ಪ್ರಯೋಜನ, ಪರಿಮಳ, ನಾಡೊಳಗೆ ಹರಿದು ಜನಜೀವನವನ್ನು ಚೇತರಿಸದೆ ಇರದು. ಹೀಗೆ ಜಾನಪದ ಸಾಹಿತ್ಯ ಗುಪ್ತಗಾಮಿನಿಯಾಗಿ ಹರಿದಿರುವ ಶಿಕ್ಷಣಶಾಸ್ತ್ರದ ಬಗೆಗಿರುವ ಜ್ಞಾನವನ್ನು ವಿದ್ಯಾಸಂಸ್ಥೆಗಳು, ವಿಶ್ವವಿದ್ಯಾಲಯಗಳು ಸ್ವೀಕರಿಸಿ, ಸಹಜವಾದ ಜಾನಪದ ಸ್ವಾತಂತ್ರ್ಯ ಹೊಂದಿ ಹತ್ತು ದಶಕಗಳಾದರೂ ಭಾರತವು ಪ್ರಗತಿ ಹೊಂದಿಲ್ಲ. ಇದಕ್ಕೆ ಕಾರಣ ಪಾಶ್ಚಾತ್ಯರ ಅಂಧ ಅನುಕರಣೆ. ಅಂದರೆ ವಸಾಹತು ರಾಷ್ಟ್ರವಾಗಿದ್ದ ಭಾರತದಲ್ಲಿ ಬ್ರಿಟಿಷರು ಕಾರಕೂನರನ್ನು ತಯಾರು ಮಾಡುವ ಶಿಕ್ಷಣ ಪದ್ಧತಿಯನ್ನು ಜಾರಿಯಲ್ಲಿ ತಂದಿದ್ದರು. ಇಂದೂ ಕೂಡ ನಾವು ಅದನ್ನೆ ಅನುಸರಿಸುತ್ತಾ ಬಂದಿದ್ದೇವೆ. ಇದರಿಂದ ಭಾರತದ ಸ್ಥಿತಿ ಚಿಂತಾಜನಕವಾಗಿದೆ. ಅಂದರೆ ಭಾರತೀಯ ಪರಿಸರಕ್ಕೆ ಒಗ್ಗುವಂತಹ ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಮಾನವೀಯತೆಯನ್ನೊಳಗೊಂಡ ಸ್ವರೂಪವನ್ನು ಅನ್ವೇಷಿಸಿಕೊಳ್ಳಬೇಕು. ಹೀಗಾಗಿಯೇ ಭಿನ್ನ ಭಿನ್ನ ಜ್ಞಾನ ಶಿಸ್ತುಗಳಾದ ಸಮಾಜಶಾಸ್ತ್ರ ಮುಂತಾದವುಗಳು ದೇಶಿಯ ಸಿದ್ಧಾಂತದ ಕಡೆಗೆ ಒಲಿದಿವೆ. ಅದು ಒಂದರ್ಥದಲ್ಲಿ ಜನಪದ ಬದುಕನ್ನೇ ಸಂಪೂರ್ಣವಾಗಿ ಆವರಿಸಿಕೊಂಡಿದೆ. ಹೀಗಾಗಿ ನಾವು ಜಾನಪದದ ಮೂಲಕ ನಮ್ಮ ಶಿಕ್ಷಣದಲ್ಲಿ ಮೌಲ್ಯಗಳನ್ನು ಪಡೆಯಬೇಕಾದ್ದದು ಅವಶ್ಯಕವಾಗಿದೆ.

ಶಿಕ್ಷಣದ ಮುಖಾಂತರ ನಾವು ನಮ್ಮ ಮಕ್ಕಳಿಗೆ ಮೌಲ್ಯಗಳನ್ನು ಹೇಳುವಾಗ ಅವು ವಿವಿಧ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಆಧ್ಯಾತ್ಮಿಕ ಮೌಲ್ಯಗಳ ಪುನುತ್ಥಾನ ನಡೆಯುವುದು ಅಗತ್ಯ. ಈ ದಿಸೆಯಲ್ಲಿ ಈ ಅಭ್ಯಾಸವು ಒಂದು ಮಹತ್ವದ ಕ್ರಿಯೆಯಾಗಿದೆ.

ಮಾನವ ಹಕ್ಕಿಯಂತೆ ಹಾರುವುದನ್ನ ಕಲಿತ, ಮೀನಿನಂತೆ ಈಜುವುದನ್ನು ಕಲಿತ ಆದರೆ ಮಾನವನಾಗಿ ಬಾಳುವುದನ್ನು ಕಲಿತಿಲ್ಲ. ನಮ್ಮ ದೇಶದ ಹಾಗೂ ವಿಶ್ವದ ಜನತೆಯ ಕಲ್ಯಾಣಕ್ಕೆ ಹಾಗೂ ಶಾಂತಿಗೆ ಕಾಣಿಕೆ ಸಲ್ಲಿಸುವಂತಹ ಮಾನವೀಯ ಮೌಲ್ಯಗಳುಳ್ಳ ಮತ್ತು ಸಮತೂಕದ ವ್ಯಕ್ತಿತ್ವವುಳ್ಳ ನಾಗರಿಕನನ್ನು ಉತ್ಪಾದಿಸಬೇಕು. ಮೌಲ್ಯಗಳು ನೈತಿಕ ಜೀವನದ ವಿಧಾನದ ಎಲ್ಲ ಉಪಕ್ರಮಗಳ ಒಂದಂಶವಾಗಬೇಕಾದರೆ ಮೌಲಿಕ ಶಿಕ್ಷಣ ಅತ್ಯಾವಶ್ಯಕವಾಗುತ್ತದೆ. ಶಾಲೆ ಮೌಲಿಕ ಶಿಕ್ಷಣಕ್ಕೆ ಪೂರಕ ವಾತಾವರಣವನ್ನು ನಿರ್ಮಿಸಲು ಪೋಷಕರು ಸಹಕರಿಸುವುದು ಅವಶ್ಯಕ. ಮೌಲ್ಯ ಶಿಕ್ಷಣದ ತರಬೇತಿಯೊಂದಿಗೆ ಸಮಾಜವನ್ನು ಪರಿವರ್ತಿಸಬೇಕು. ಹಲವಾರು ಕೆಲಸ ಕಾರ್ಯದಲ್ಲಿ ಪರಸ್ಪರ ಸಹಕರಿಸಿಕೊಳ್ಳಲು ಮೌಲ್ಯ ಶಿಕ್ಷಣ ಅವಶ್ಯ. ಈ ದಿಶೆಯಲ್ಲಿ ಈ ಪ್ರಬಂಧವು ಒಂದಿನಿತಾದರೂ ಸಹಾಯಕವಾಗಬಲ್ಲುದಾಗಿದೆ ಎಂಬ ಭರವಸೆ ಹೊಂದಲಾಗಿದೆ.

### 6. ಅಧ್ಯಯನದ ಇತಿಮಿತಿಗಳು

ಈ ಸಂಶೋಧನೆಯಲ್ಲಿ ಜಾನಪದಗಳಲ್ಲಿ ಬರುವ ಶೈಕ್ಷಣಿಕ ವಿಚಾರ, ಶೈಕ್ಷಣಿಕ ಅಂಶಗಳು ಮತ್ತು ಶ್ರೇಷ್ಠ ಮೌಲ್ಯಗಳ ಪ್ರಾಮುಖ್ಯತೆಯನ್ನು ಆಯ್ದ ಕೆಲವು ಗ್ರಂಥ ಭಂಡಾರದ ಜಾನಪದಗಳಿಂದ ಮಾತ್ರ ತೆಗೆದುಕೊಂಡು ಅದರಲ್ಲಿ ಹಲವು ಜಾನಪದರು ರಚಿಸಿದ ಕೆಲವು ಜಾನಪದ ಸಾಹಿತ್ಯದಿಂದ ಶಿಕ್ಷಣ ಮತ್ತು ಜೀವನ ಮೌಲ್ಯಗಳನ್ನು ಒಳಗೊಂಡ ಜಾನಪದಗಳನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

### 7. ಅಧ್ಯಯನದ ಅಂಶಗಳು

ಪ್ರಸ್ತುತ ಅಧ್ಯಯನಕ್ಕಾಗಿ ಬೇಕಾಗುವ ಶೈಕ್ಷಣಿಕ ವಿಚಾರಗಳು ಹಾಗೂ ಜೀವನದ ಮೌಲ್ಯಗಳಿಗೆ ಸಂಬಂಧಿಸಿದಂತೆ ಆಯ್ದ ಜಾನಪದ ಸಾಹಿತ್ಯದಿಂದ ಆಯ್ದುಕೊಳ್ಳಲಾಗಿದೆ. ಶೈಕ್ಷಣಿಕ ಮೌಲ್ಯಗಳಿಗೆ ಸಂಬಂಧಪಟ್ಟ ಅನೇಕ ಜಾನಪದಗಳನ್ನು ಸಂಗ್ರಹಿಸಿ ವಿಂಗಡಿಸಿ ಅರ್ಥೈಸಲಾಗಿದೆ. ಒಟ್ಟಾರೆಯಾಗಿ ಪ್ರಸ್ತ ಅಧ್ಯಯನದ ಮೂಲ ಆಕರಗಳು ಜಾನಪದ ಸಾಹಿತ್ಯ ಕೃತಿಯಾಗಿದ್ದು ಅಧ್ಯಯನವು ಪ್ರಾಥಮಿಕ ಮಾಹಿತಿ ಅಂಶಗಳ ಮೇಲೆ ಅವಲಂಬಿತವಾಗಿದೆ.

### 8. ಅಧ್ಯಯನದ ಸಾಧನಗಳು

ಅಧ್ಯಯನದ ಉದ್ದೇಶಕ್ಕಾಗಿ ಬೇಕಾಗುವ ಮಾಹಿತಿಯನ್ನು ಪಡೆಯಲು ಜಾನಪದರು ರಚಿಸಿದ ಶೈಕ್ಷಣಿಕ ಮೌಲ್ಯವುಳ್ಳ ಜಾನಪದ ಸಾಹಿತ್ಯವನ್ನು ಕೂಲಂಕಷವಾಗಿ ಆಧ್ಯಯನ ಮಾಡಿ ಪ್ರಸ್ತುತ ಪಡಿಸಿ ವಿಶ್ಲೇಷಿಸಿ ನಿರೂಪಿಸಲಾಗುವುದು.

**9. ವಿಶ್ಲೇಷಣೆ ಮತ್ತು ನಿರೂಪಣಾ ವಿಧಾನ**

ಅಧ್ಯಯನದ ಉದ್ದೇಶಗಳ ಪ್ರಕಾರ ಬೇಕಾಗುವ ಪೂರಕ ಮಾಹಿತಿಯನ್ನು ಆಯ್ದ ಜಾನಪದ ಸಾಹಿತ್ಯದಿಂದ ಆಯ್ದು ಪ್ರಸ್ತುತ ಪಡಿಸುವುದರೊಂದಿಗೆ ಅನೇಕ ಜಾನಪದ ಸಾಹಿತ್ಯ ತಜ್ಞರ ಜೊತೆ ಚರ್ಚಿಸಿ ವಿಶ್ಲೇಷಿಸಿ ನಿರೂಪಣೆಯನ್ನು ಮಾಡಲಾಗಿದೆ.

**10. ಕನ್ನಡ ಜಾನಪದ ಸಾಹಿತ್ಯದಲ್ಲಿ ಶೈಕ್ಷಣಿಕ ಮೌಲ್ಯಗಳು**

'ಮೌಲ್ಯ' ಎಂಬುದನ್ನು ಆಂಗ್ಲ ಭಾಷೆಯಲ್ಲಿ 'Value' ಎಂದು ಕರೆಯುತ್ತಾರೆ. ಕನ್ನಡದಲ್ಲಿ 'ಗೌರವಿಸಲ್ಪಡುವ' ಎನ್ನುವ ಅರ್ಥವನ್ನು ಇದು ನೀಡುತ್ತದೆ. ಮನುಷ್ಯನಾದವನಿಗೆ ಗುರಿಗಳನ್ನು ಸಾಧಿಸಲು ಕೆಲವು ತತ್ವಗಳಿವೆ. ಆ ತತ್ವಗಳೇ ಮೌಲ್ಯಗಳು. ಇವು ಜನಸಮುದಾಯದಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡುತ್ತವೆ. ಮನುಷ್ಯ ಮೊದಲು ತಾನು ಸುಧಾರಿಸಿಕೊಂಡು ನಂತರ ಸಮಾಜ ಸುಧಾರಣೆಗಾಗಿ ಶ್ರಮಿಸಲು ಮೌಲ್ಯಗಳು ಸಹಾಯಕ್ಕೆ ಬರುತ್ತವೆ. ಶ್ರೇಷ್ಠ ಶಿಕ್ಷಣತಜ್ಞರು, ಸಮಾಜಚಿಂತಕರು, ಪ್ರಭಾವಿ ವ್ಯಕ್ತಿಗಳು ಉತ್ತಮ ಮೌಲ್ಯಗಳನ್ನು ಜನರಲ್ಲಿ ಬಿಂಬಿಸಲು ನಿರಂತರ ಶ್ರಮವಹಿಸುತ್ತಾ ಬಂದಿದ್ದಾರೆ. ಉದಾ: 'ಗಾಂಧೀಜಿಯವರು ಅಹಿಂಸೆಯೇ ಪರಮಧರ್ಮ' ಎಂದಿದ್ದಾರೆ. ಇದೂ ಒಂದು ಉತ್ತಮವಾದ ಮೌಲ್ಯವಾಗಿದೆ.

**11. ಮೌಲ್ಯಗಳ ಉದ್ದೇಶಗಳು.**

1. ಪ್ರತಿ ಮನುಷ್ಯನಲ್ಲಿ ಐಕ್ಯತೆ, ಪ್ರಾಣಿದಯೆ, ನ್ಯಾಯ, ಸ್ವಾಮಿಭಕ್ತಿಯ ಗುಣಗಳನ್ನು ಬೆಳೆಸುವುದು.
2. ವರ್ತನೆಯನ್ನು ನಿಯಂತ್ರಿಸುವಲ್ಲಿ ಸಹಾಯಕ್ಕೆ ಬರುವ ಅಂಶಗಳೇ ಮೌಲ್ಯಗಳು ಎಂಬ ಕಲ್ಪನೆ ಮೂಡಿಸುವುದು.
3. ದುರಾಸೆ, ದುಂದುಗಾರಿಕೆ, ತಾತ್ಕಾಲಿಕವಾಗಿ ಪ್ರಗತಿಯನ್ನು ಸಾಧಿಸಿದರೂ, ಕೊನೆಗೆ ಆದರ್ಶಗಳಿಗೆ ಯಶಸ್ಸು ಎಂಬ ಕಲ್ಪನೆ ಮೂಡಿಸುವುದು.
4. ಒಳ್ಳೆಯತನಗಳು, ಸೌಂದರ್ಯ, ಸತ್ಯ, ಸುಖ, ಇವು ಕೊನೆಯ ಮೌಲ್ಯಗಳೆಂಬ ಕಲ್ಪನೆ ಮೂಡಿಸುವುದು.
5. ಮೌಲ್ಯಗಳು ಗಳಿಸಲ್ಪಟ್ಟವು ಉತ್ತಮ ಕುಟುಂಬ, ಸಮಾಜ, ಪರಿಸರದಿಂದ ಉತ್ತಮ ಮೌಲ್ಯಗಳು ರೂಪಿತಗೊಳ್ಳುತ್ತವೆ, ಎಂಬ ಕಲ್ಪನೆ ಮೂಡಿಸುವುದು.

**12. ಮೌಲ್ಯಗಳ ಕುರಿತ ವ್ಯಾಖ್ಯೆಗಳು**

**ಎ) ರವೀಂದ್ರನಾಥ ಠಾಗೋರ್:** "ಮೌಲ್ಯ ಶಿಕ್ಷಣವೆಂದರೆ ಅಂಕಗಳನ್ನು ಸಂಗ್ರಹಿಸುವುದಲ್ಲ, ಮಾನವನನ್ನಾಗಿ ರೂಪಿಸುವುದು, ಒಬ್ಬರಿಗೊಬ್ಬರು ಅರ್ಥಮಾಡಿಕೊಳ್ಳುವುದು, ಮಾನವೀಯ ಗುಣಗ್ರಾಹಕತೆ ಬೆಳೆಸುವುದು."

ರವೀಂದ್ರನಾಥ ಠಾಗೋರ್ ಶಿಕ್ಷಣವನ್ನು ಕುರಿತು ಆಳವಾಗಿ ಚಿಂತಿಸಿದವರು. ಶಿಕ್ಷಣ ಮಾನವೀಯ ಗುಣಗಳನ್ನು ವ್ಯಕ್ತಿಗಳಲ್ಲಿ ಬೆಳೆಸಬೇಕು ಎಂದು ಆಶಿಸಿದವರು. ಅವರ ಅಭಿಪ್ರಾಯದಲ್ಲಿ ಪ್ರತಿಯೊಬ್ಬರಲ್ಲೂ ಸಮೂಹ ಪ್ರಜ್ಞೆಯಿರಬೇಕು. ಸಮೂಹದ ಒಳಿತಿಗಾಗಿ ಶ್ರಮಿಸುವ ಮನೋಭಾವ ಎಲ್ಲರಲ್ಲೂ ಬೆಳೆದು ಬರಬೇಕು. ಹೊಂದಾಣಿಕೆ, ಸಹಕಾರ, ಸಹಾನುಭೂತಿ, ಮುಂತಾದ ಮಾನವೀಯ ಗುಣಗಳು ಪ್ರತಿಯೊಬ್ಬರಲ್ಲಿಯೂ ರೂಪಿತವಾಗಬೇಕು. ಮಾನವನಲ್ಲಿ ಮಾನವೀಯ ಗುಣಗಳು ಬರಬೇಕಾದರೆ ಪರಸ್ಪರರನ್ನು ಅರ್ಥೈಸಿಕೊಂಡು ಹೊಂದಾಣಿಕೆಯ ಜೀವನ ನಡೆಸುವುದು ಆವಶ್ಯಕ. ಇಂಥ ಹೊಂದಾಣಿಕೆಯು ಆದರ್ಶಯುತ ನಡವಳಿಕೆಯಿಂದ ಮಾತ್ರ ಸಾಧ್ಯ.

**ಬಿ) ಜೆ.ಎಸ್.ಬ್ರುಬೆಕ್ಕರ್:** "ಒಬ್ಬನ ಶಿಕ್ಷಣದ ಗುರಿಯನ್ನು ಹೇಳುವದೆಂದರೆ ಆತನ ಶೈಕ್ಷಣಿಕ ಮೌಲ್ಯಗಳನ್ನೇ ಹೇಳುವುದಾಗಿದೆ" ಪಠ್ಯಪುಸ್ತಕದಲ್ಲಿರುವ ವಿಷಯಕ್ಕಿಂತ ವ್ಯಕ್ತಿಯಲ್ಲಿ ಮೌಲ್ಯಗಳೇ ಹೆಚ್ಚು ಪರಿಣಾಮವನ್ನು ಬೀರುತ್ತವೆ. ವ್ಯಕ್ತಿ ಹಣಗಳಿಕೆಗಾಗಿ ಶಿಕ್ಷಣವನ್ನು ಪಡೆಯಬಾರದು, ಉತ್ತಮ ವ್ಯಕ್ತಿತ್ವ ಆದರ್ಶಗುಣಗಳು ಕಲಿಕೆಯ ಮೂಲಕ ಹೊರಹೊಮ್ಮ ಬೇಕು. 'ವಿದ್ಯೆಗಿಂತ ವಿನಯವೇ ಭೂಷಣ'ವೆಂಬಂತೆ ಮನುಷ್ಯನ ಗುರಿ ಶಿಕ್ಷಣವನ್ನು ಪಡೆಯುವುದರ ಜೊತೆಗೆ ವ್ಯಕ್ತಿತ್ವ ನಿರ್ಮಾಣವನ್ನು ಮಾಡಿಕೊಳ್ಳುವಂತಿರಬೇಕು ಎನ್ನುತ್ತದೆ ಬ್ರುಬೆಕ್ಕರ್ ವ್ಯಾಖ್ಯೆ.

**13. ಮೌಲ್ಯಗಳ ವರ್ಗೀಕರಣ**

ಮೌಲ್ಯಗಳನ್ನು ಪಟ್ಟಿಮಾಡುತ್ತಾ ಹೋದಂತೆಲ್ಲಾ ಸುಮಾರು 100ಕ್ಕೂ ಹೆಚ್ಚು ಮೌಲ್ಯಗಳು ನಮ್ಮ ಗಮನಕ್ಕೆ ಬರುತ್ತವೆ. ಹಾಗೂ ಎನ್.ಸಿ.ಇ.ಆರ್.ಟಿ ಯು ಪ್ರಚುರ ಪಡಿಸಿದ 88 ಮೌಲ್ಯಗಳು ಮುಖ್ಯವಾಹಿನಿಗೆ ಬರುತ್ತವೆ. ಅದರಲ್ಲಿ ಮಾನವೀಯತೆ, ಸಮಾನತೆ, ಸ್ವಾತಂತ್ರ್ಯ, ಒಳ್ಳೆಯ ನಡತೆ, ಕಾರ್ಯದಕ್ಷತೆ, ಸರ್ವರ ಹಿತ, ಸಹಕಾರ, ಪ್ರಾಣಿದಯೆ, ಆತ್ಮ ಸಂಯಮ, ಆತ್ಮಗೌರವ, ಆರೋಗ್ಯಕರ ಜೀವನ, ಜ್ಞಾನಸಂಪಾದನೆ, ಧೈರ್ಯ, ಸಮಾಜಸೇವೆ, ಕರುಣೆ, ವಿಶ್ವಪ್ರೇಮ, ಅನುಕಂಪ, ಶಾಂತಿ, ಕರ್ತವ್ಯ, ಪ್ರಾಮಾಣಿಕತೆ, ಅಸ್ಪೃಶ್ಯತೆ, ದೇಶಪ್ರೇಮ, ಅಹಿಂಸೆ, ಸಮಾಜವಾದ, ಸರಳಜೀವನ, ಸ್ವಯಂಶಿಸ್ತು, ಭಕ್ತಿ, ನ್ಯಾಯ, ಸಹನೆ, ಕಾರ್ಯದಲ್ಲಿ ಏಕಾಗ್ರತೆ, ಇವೆಲ್ಲವೂ ಮೌಲ್ಯಗಳೇ. ಆದರೆ ಜನಪದ ಸಾಹಿತ್ಯದಲ್ಲಿ ಶೈಕ್ಷಣಿಕ ಮೌಲ್ಯ ಎಂದಾಗ ಶೈಕ್ಷಣಿಕ ಮೌಲ್ಯಗಳು ಸಾಮಾನ್ಯವಾಗಿ ಶಾಲೆಯಲ್ಲಿ ಬೋಧನೆ ಮಾಡುವ ಸಂದರ್ಭದಲ್ಲಿ ಕಂಡುಬರುವ ಸಾಮಾಜಿಕ ಮೌಲ್ಯ, ನೈತಿಕ ಮೌಲ್ಯ, ಬೌದ್ಧಿಕ ಮೌಲ್ಯ, ಸಾಹಿತ್ಯಕ ಮೌಲ್ಯ, ಮನೋರಂಜನಾತ್ಮಕ ಮೌಲ್ಯ, ಕಲಾಭಿಮಾನದ ಮೌಲ್ಯ, ಆಧ್ಯಾತ್ಮಿಕ ಮೌಲ್ಯಗಳ ಕುರಿತು ವಿವೇಚಿಸಲಾಗುತ್ತದೆ.

ಈ ಮೇಲಿನ ಮೌಲ್ಯಗಳನ್ನು ವೈಜ್ಞಾನಿಕ ದೃಷ್ಟಿಯಿಂದ ಅಧ್ಯಯನ ಮಾಡಿ ಅವುಗಳ ಉಗಮ ಮತ್ತು ವ್ಯಾಪ್ತಿಗಳನ್ನು ಗಮನಕ್ಕೆ ತೆಗೆದುಕೊಂಡಾಗ ಮೌಲ್ಯಗಳನ್ನು ಪ್ರಮುಖವಾಗಿ ಹತ್ತು ಪ್ರಕಾರಗಳಲ್ಲಿ ವಿಂಗಡಿಸಬಹುದಾಗಿದೆ. ಅವುಗಳಲ್ಲಿಯೇ ಮೇಲಿನ ಎಲ್ಲ ಮೌಲ್ಯಗಳನ್ನು ನಾವು ಅಳವಡಿಸಬಹುದಾಗಿದೆ. ಅವುಗಳು

**ಅ) ಸಾಮಾಜಿಕ ಮೌಲ್ಯ:** ಸಾಮಾಜಿಕ ಮೌಲ್ಯಗಳು ಎಂದಾಗ ಸಮೂಹ ಜೀವನ ಮತ್ತು ಸಮೂಹದ ಒಳಿತಿನಿಂದ ರೂಪಿತಗೊಂಡ ಆದರ್ಶಗಳು ನಮ್ಮ ಗಮನಕ್ಕೆ ಬರುತ್ತವೆ. ಸಮಾಜಸೇವೆ, ಆತ್ಮಾರ್ಪಣೆ, ನ್ಯಾಯ, ಪರೋಪಕಾರ, ದಯಾಳುತನ ನಿರಂತರ ಉದ್ಯೋಗ, ಅಸ್ಪೃಶ್ಯತೆ, ಪರಹಿತಾಸಕ್ತಿ, ಸಹಬಾಳ್ವೆ, ಸಮಾನತೆ, ಸ್ವಾತಂತ್ರ್ಯ, ಪ್ರಾಣಿದಯ ಪರಿಸರಪ್ರಜ್ಞೆ, ದೇಶಪ್ರೇಮ, ಹಿರಿಯರ ಬಗ್ಗೆ ಗೌರವ, ಸ್ವಾವಲಂಬನೆ, ಮುಂತಾದ ಗುಣಗಳು ಸಾಮಾಜಿನ ಮೌಲ್ಯಗಳಲ್ಲಿ ಕಂಡುಬರುತ್ತವೆ.

**ಆ) ಬೌದ್ಧಿಕ ಮೌಲ್ಯ:** ಮನುಷ್ಯನ ವ್ಯಕ್ತಿತ್ವ ನಿರ್ಮಾಣವಾಗುವದು ಆತನ ಬೌದ್ಧಿಕ ವರ್ತನೆಗಳಿಂದ. ಓದು, ಬರಹ, ಲೆಕ್ಕ ಮುಂತಾದವುಗಳನ್ನು ಕುರಿತು ಜೀವನ ನಡೆಸಿದರೆ ಸಾಲದು. ಹೊಂದಿಕೊಳ್ಳುವ ಸಾಮರ್ಥ್ಯ, ಕಲಿಕಾ ಸಾಮರ್ಥ್ಯ. ಸಮಸ್ಯೆ ಬಗೆಹರಿಸುವ ಸಾಮರ್ಥ್ಯ ಮುಂತಾದವುಗಳನ್ನು ಪ್ರತಿನಿಧಿಸುವುದೇ ಬುದ್ಧಿಶಕ್ತಿ ಎಂದು ಕರೆಯಿಸಿಕೊಳ್ಳುತ್ತದೆ.

**ಇ) ಆರೋಗ್ಯ ಮೌಲ್ಯ:** "ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸು ಇರುತ್ತದೆ" ಎಂಬಂತೆ ಆರೋಗ್ಯಯುತ ಮನುಷ್ಯನ ದೇಹ

ಮತ್ತು ಮನಸ್ಸು ಎರಡೂ ನಿರ್ಮಲ ಹಾಗೂ ಆರೋಗ್ಯಯುತವಾಗಿರುತ್ತವೆ. ಮನುಷ್ಯ ಬಾಹ್ಯವಾಗಿ ತನ್ನ ಬುದ್ಧಿಶಕ್ತಿಯಿಂದ, ಸಾಮರ್ಥ್ಯಗಳಿಂದ ಏನೆಲ್ಲಾ ಗಳಿಸಬಹುದು. ಅದೇ ರೀತಿಯಾಗಿ ಆರೋಗ್ಯ ರಕ್ಷಣೆಯ ಕಡೆಗೂ ಆತ ಗಮನವನ್ನು ಕೊಡಬೇಕಾಗುತ್ತದೆ.

**ಈ) ಆರ್ಥಿಕ ಮೌಲ್ಯ:** ಮನುಷ್ಯನಲ್ಲಿ ಅರ್ಥಿಕ ಸುಧಾರಣೆಯು ನ್ಯಾಯಬದ್ಧವಾಗಿರಬೇಕು. ಜೊತೆಗೆ ಆದರ್ಶಗಳನ್ನು ಬದಿಗೊತ್ತಿ ಹಣ ಸಂಗ್ರಹಿಸುವದು ಸರಿಯಾದ ಮಾರ್ಗವಲ್ಲವೆಂದು ಜನಪದ ಸಾಹಿತ್ಯ ಹೇಳುತ್ತಾ ಬಂದಿದೆ. ಜನಪದರು ದುಡಿಮೆಯ ಫಲವನ್ನು ಎಂದೂ ಒಬ್ಬರೆ ಊಟ ಮಾಡಿದವರಲ್ಲ. ಕೃಷಿಗೆ ಸಹಾಯಕವಾದ ಆಯಗಾರರಿಗೆ, ಆರ್ಥಿಕವಾಗಿ ದುರ್ಬಲರಿದ್ದವರಿಗೆ, ಪಶುಪಕ್ಷಿಗಳಿಗೆ ತಮ್ಮ ಆದಾಯವನ್ನು ಹಂಚಿ ಎಲ್ಲರೂ ಸುಖಮಯ ಜೀವನ ನಡೆಸುವಂತೆ ನೋಡಿಕೊಳ್ಳುತ್ತಾ ಬಂದಿದ್ದಾರೆ. ಆರ್ಥಿಕ ಮೌಲ್ಯವನ್ನು ಕುರಿತು ಹೇಳುವಾಗ ಜನಪದ ಸಾಹಿತ್ಯವು ದುಡಿಮೆಯ ಹಿನ್ನೆಲೆಯಲ್ಲಿ ಪ್ರಾಮಾಣಿಕತೆ, ಶ್ರದ್ಧೆ, ಅತಿ ಆಸೆ ಇಲ್ಲದಿರುವಿಕೆ, ಹಂಚಿ ತಿನ್ನುವಿಕೆ. ದುಡಿದದ್ದೆಲ್ಲ ತನ್ನದಲ್ಲ ಅದರಲ್ಲಿ ಸಮಾಜದ ಪಾಲಿದೆ ಎಂಬ ವಿಚಾರವನ್ನು ತಿಳಿಸಿದ್ದಾರೆ.

**ಉ) ನೈತಿಕ ಮೌಲ್ಯ:** "Moral" ಎಂಬ ಇಂಗ್ಲೀಷ್ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ನೀತಿ' ಎಂಬ ಶಬ್ದವನ್ನು ಬಳಸಲಾಗುತ್ತದೆ. ಸದ್ವರ್ತನೆ, ನೀತಿಶೀಲತೆ, ನ್ಯಾಯ, ಉತ್ತಮ ಮಾರ್ಗದರ್ಶನ, ನೈತಿಕಧರ್ಮ, ನೈತಿಕ ಪ್ರಶ್ನೆ, ಮುಂತಾದವುಗಳು ನೀತಿ ಎಂಬ ಶಬ್ದದ ವ್ಯಾಪ್ತಿಯಲ್ಲಿ ಬರುತ್ತವೆ. ಆದ್ದರಿಂದ ಮನುಷ್ಯನು ಯಾವುದರಿಂದ ಉತ್ತಮ ವರ್ತನೆಗಳನ್ನು ಹೊಂದುವನು, ಉತ್ತಮ ಆದರ್ಶಗಳನ್ನು ಅಳವಡಿಸಿಕೊಳ್ಳುವನೋ ಹಾಗೂ ಉತ್ತಮ ಪ್ರಜೆಯಾಗಿ ಬಾಳುವುದಕ್ಕೆ ಸಹಾಯವನ್ನು ನೀಡುವುದೋ ಅದೆಲ್ಲವೂ 'ನೀತಿ' ಎಂದು ಕರೆಯಲ್ಪಡುತ್ತದೆ.

**ಊ) ವ್ಯಕ್ತಿನಿಷ್ಠ ಜೀವನ ಮೌಲ್ಯಗಳು:** ತಲೆತಲಾಂತರಗಳಿಂದ ರೂಪಗೊಳ್ಳುತ್ತ ಬಂದ ಜನಪದ ಧರ್ಮ ಒಂದು ಪರಂಪರೆಯಾಗಿ ಮುಂದುವರೆಯುತ್ತದೆ. ಅದು ಅಲಿಖಿತವಾಗಿರುವುದರಿಂದ ಕಾಲಕಾಲಕ್ಕೆ ಬದಲಾಗುತ್ತಲೇ ಇರುತ್ತದೆ. ಜೀವಪರವಾದ. ಜೀವನಪರವಾದ, ಸಮುದಾಯಪರವಾದ ಮಾನವೀಯ ಮೌಲ್ಯಗಳು ಮಾನವ ಬದುಕಿಗೆ ಮಾದರಿಯಾಗುತ್ತವೆ. ಅವುಗಳೊಂದಿಗೆ ವ್ಯಕ್ತಿ ಬದುಕುಬೇಕೆಂಬುದನ್ನು ಸಮಾಜ ಅಪೇಕ್ಷಿಸುತ್ತದೆ. ಒಂದರ್ಥದಲ್ಲಿ ಮಾನವೀಯ ಮೌಲ್ಯಗಳೆಲ್ಲವೂ ವ್ಯಕ್ತಿಕೇಂದಿತವಾದವುಗಳೇ. ಒಬ್ಬ ವ್ಯಕ್ತಿಯ ವ್ಯಕ್ತಿತ್ವಕ್ಕೆ ಸೀಮಿತಗೊಳ್ಳುವ ಮೌಲ್ಯಗಳನ್ನು ವ್ಯಕ್ತಿನಿಷ್ಠವೆಂದು ಹೇಳಲಾಗಿದೆ.

**ಋ) ಕೌಟುಂಬಿಕ ಜೀವನ ಮೌಲ್ಯಗಳು:** ಸಮಾಜದ ಒಂದು ಘಟಕವಾಗಿರುವ ಕುಟುಂಬವು ಸಾಮಾಜಿಕ ವ್ಯವಸ್ಥೆಯ ಒಂದು ಭಾಗವೂ ಹೌದು. ಪ್ರತಿ ಕುಟುಂಬವೂ ಸಾಮಾಜಿಕ ಚೌಕಟ್ಟಿಗೆ ಒಳಪಟ್ಟಿರುತ್ತದೆ. ಇದರೊಂದಿಗೆ ತನ್ನದೇ ಆದ ನೈತಿಕ ನಿಮಗಳನ್ನೊಳಗೊಂಡಿರುತ್ತದೆ, ಅದು ತನ್ನದೇಯಾದ ಧ್ಯೆಯೋದ್ದೇಶಗಳನ್ನು ಹೊಂದಿರುತ್ತದೆ. ಕುಟುಂಬದ ಸದಸ್ಯರೆಲ್ಲರೂ ಅದಕ್ಕೆ ಬದ್ಧರಾಗಿರುತ್ತಾರೆ. ಶತಮಾನದ ಹಿಂದೆ ವಿಭಕ್ತ ಕುಟುಂಬಗಳು ನಮ್ಮಲ್ಲಿ ತುಂಬ ವಿರಳವಾಗಿದ್ದವು. ಅವಿಭಕ್ತ ಕುಟಂಬ ಪದ್ಧತಿ ಜನಪದ ಸಂಸ್ಕೃತಿಯ ಲಕ್ಷಣಗಳಲ್ಲೊಂದು. ಕೂಡಿಬಾಳಿದರೆ ಸ್ವರ್ಗ ಸುಖವೆಂಬುದು ಅವರ ಜೀವನ ದೃಷ್ಟಿ ಕಳೆದೊಂದು ಶತಮಾನದಲ್ಲಿ ಭಾರತದ ಸಾಮಾಜಿಕ ವ್ಯವಸ್ಥೆ ತೀವ್ರಗತಿಯಲ್ಲಿ ಬದಲಾಯಿತು. ಅದರ ಮೂಲ ಸ್ವರೂಪವನ್ನು ಜನಪದ ಸಾಹಿತ್ಯದಿಂದಲೇ ತಿಳಿಯಬೇಕಿದೆ. ಕುಟುಂಬ ಕೇಂದ್ರಿತ ಜೀವನಮೌಲ್ಯಗಳನ್ನು ಅರಿಯಬಹುದಾಗಿದೆ.

**ಎ) ಸಾಂಸ್ಕೃತಿಕ ಜೀವನ ಮೌಲ್ಯಗಳು:** ನಮ್ಮ ಆಲೋಚನೆಗಳು ಬದಲಾದಂತೆ 'ಸಂಸ್ಕೃತಿ'ಯ ವ್ಯಾಖ್ಯೆಗಳು ಬದಲಾಗುತ್ತಿವೆ. 'ಸಂಸ್ಕೃತಿ' ಪದಕ್ಕೆ ವಿಭಿನ್ನ ಅರ್ಥಗಳು ಸೇರಿಕೊಳ್ಳುತ್ತಿವೆ. ಸಮಷ್ಟಿ ಜೀವನದ ಅಂತರಂಗದ ಸಾಧನೆಗೆ ಸಹಕಾರಿಯಾದ ಸಾಮಗ್ರಿಗಳಿಂದ ಹಿಡಿದು ವ್ಯಷ್ಟಿ ಜೀವನದ ವಿಕಾಸಕ್ಕೆ ಕಾರಣವಾದ ಸಂಸ್ಕಾರದ ವರೆಗೆ ಈ ಪದದ ಅರ್ಥ ಬೆಳೆದಿದೆ'. ವ್ಯಕ್ತಿಕೇಂದ್ರಿತ ಸಾಮಾಜಿಕ ಮೌಲ್ಯಗಳು ಸಂಸ್ಕೃತಿಯ ಒಡಲ ಎಳೆಗಳೇ ಎಂಬುದನ್ನು ನೆನಪಿಸಿಕೊಳ್ಳಬೇಕು. 'ಜನಪದ ಸಂಸ್ಕೃತಿ'ಯ ಒಡಲಲ್ಲಿಯೇ ಹಲವು ಸಂಸ್ಕೃತಿಗಳಿರುತ್ತವೆ. ಅದು ಬಹುತ್ವದ ಸಂರಚನೆ. ಆದರೆ ಒಟ್ಟಾರೆಯಾಗಿ ಗ್ರಹಿಸುವ ಪರಂಪರೆ ಬೆಳೆದು ಬಂದಿದೆ. ಈ ಚಿಂತನೆಯ ಹಿನ್ನೆಲೆಯಲ್ಲಿ ಜಾನಪದೀಯ ಸಾಂಸ್ಕೃತಿಕ ಮೌಲ್ಯಗಳನ್ನು ನಾಲಗೆಯ ಮೇಲಿನ ನಂಬಿಗೆ, ಸಂಸ್ಕೃತಿ ಸಂವಹನ, ವ್ಯಕ್ತಿ ನಿರಪೇಕ್ಷತೆ, ಸೌಂದರ್ಯಾರಾಧನೆ, ಸಾಂಸ್ಕೃತಿಕ ಪ್ರತಿರೋಧ ಈ ಐದು ಮುಖ್ಯ ನೆಲೆಗಳಲ್ಲಿ ಜನಪದ ಜೀವನದ ಸಾಂಸ್ಕೃತಿಕ ಮೌಲ್ಯಗಳನ್ನು ಅವಲೋಕಿಸಿ ವಿವರಿಸಲು ಯತ್ನಿಸಲಾಗಿದೆ.

**ಏ) ಆಧ್ಯಾತ್ಮಿಕ ವಿಚಾರಗಳು:** ವಿಭಿನ್ನ ಧರ್ಮ, ಆಚಾರಣೆಗಳಿಂದ ಕೂಡಿದ ಜನಪದ ಸಮಾಜದಲ್ಲಿ ಒಂದು ಸಾಮಾನ್ಯ ಧಾರ್ಮಿಕತೆ (Common Religious Code) ರೂಢಿಯಲ್ಲಿತ್ತು. ಹಿಂದೂ, ಮುಸ್ಲಿಂ, ಜೈನ, ಲಿಂಗಾಯತ ಮೊದಲಾದ ವಿವಿಧ ಧರ್ಮಿಯರಿಗೆಲ್ಲರಿಗೂ ಗ್ರಾಮದೇವತೆ ಒಂದೇ ಆಗಿತ್ತು. ಎಲ್ಲರೂ ಆ ಗ್ರಾಮದೇವತೆಯನ್ನು ಆರಾಧಿಸುತ್ತಿದ್ದರು. ಅಲ್ಲಿ ಸಮಾನಧರ್ಮ ಕಾಣುತ್ತಿತ್ತು. ಅದನ್ನೇ ಜನಪದಧರ್ಮವೆಂದು ಹೇಳುವುದು. ಮುಸ್ಲಿಂ, ಜೈನ, ಲಿಂಗಾಯತ ಮುಂತಾದ ಧರ್ಮಗಳು ಏಕದೇವೋಪಾಸನೆಯನ್ನು ಕಡ್ಡಾಯಗೊಳಿಸಿದ್ದರೂ ಅದನ್ನು ಮೀರಿ ಅವರು ಬಹುದೇವತಾ ಉಪಾಸಕರಾಗಿದ್ದರು. ಮೊದಲು ಸಮಾಜಧರ್ಮ, ಅನಂತರ ವೈಯಕ್ತಿಕ ಧರ್ಮ. ಈ ಎರಡೂ ಧರ್ಮಗಳನ್ನು ಜನಪದರು ಸಮನ್ವಯಗೊಳಿಸಿಕೊಂಡು ಬದುಕುತ್ತಿದ್ದರು. ಶಿಷ್ಟ ದೈವಗಳೊಂದಿಗೆ ತಳವರ್ಗಗಳ ಶಿಷ್ಟೇತರ (ಗ್ರಾಮ್ಯ) ದೈವಗಳನ್ನು ಆರಾಧಿಸುವ ಪದ್ಧತಿ ಇಂದಿಗೂ ಜನಪದರಲ್ಲಿ ಕಾಣುತ್ತೇವೆ.

**ಐ) ಲೋಕ ನೀತಿ ಮೌಲ್ಯಗಳು:** ಒಕ್ಕಲಿಗನು ಬೇಸಾಯ ಮಾಡುತ್ತ ಹಸಿರಿನ ಹೊಲಗಳಲ್ಲಿ ಬೆಳೆಗಳ
ಸಾಲಿನಲಿ ತುಂಬಿ ಬಂದ ಬೆಳೆಗಳನ್ನು ಕಂಡು ಸಂತಸದಿಂದ ಹಾಡಿದಾಗ

'ಒಕ್ಕಲಿಗ ಹಾಡಿದರ ನಾಡೆಲ್ಲ ನಕ್ಕೀತ
ಹಾಡಮರೆತರ ನಾಡ ಬಿಕ್ಕೀತ । ಜತಿಗೂಡಿ
ಜಯವೆಂದು ಹಾಡೋಣ ಜನಪದಕ'

ಎಂದು ಗ್ರಾಮೀಣ ಜನರು ತಮ್ಮ ಭಾವಗಳನ್ನು ಇಲ್ಲಿ ಬಿತ್ತರಿಸುತ್ತಾರೆ. ರೈತ ಆರೋಗ್ಯವಂತನಾಗಿದ್ದರೆ ದೇಶ ಆರೋಗ್ಯವಾಗಿ ಬಾಳಲು ಸಾಧ್ಯ. ಅವನು ಖುಷಿಯಿಂದ ಬೆಳೆ ಕಂಡು ಹಾಡಿದರ ಲೋಕವೇ ಆನಂದದಲ್ಲಿ ಲೋಕವೇ ಲೋಲಾಡುತ್ತದೆ. ಒಂದು ವೇಳೆ ಅವನು ತನ್ನ ದುಃಖ ತೋಡಿಕೊಂಡು ಬೆಳೆ ಬೆಳೆಯದಾಗ ಕಣ್ಣೀರಿಟ್ಟಾಗ ಜಗತ್ತೇ ಬಿಕ್ಕುತ್ತದೆ ಎಂಬ ಲೋಕ ನೀತಿ ಮೌಲ್ಯಗಳನ್ನು ಸಾರುತ್ತಾರೆ.

**14. ಶೈಕ್ಷಣಿಕ ನಿಹಿತಾರ್ಥಗಳು**

1. ಜಾನಪದರ ಸರ್ವಸಮಾನತೆಯ ತತ್ವವು ಸಕಲರಿಗೂ ಶಿಕ್ಷಣ ಒದಗಿಸಲು ಸಹಾಯಕವಾಗಿದೆ.
2. ಸಕಲರಿಗೂ ಲೇಸನ್ನೆ ಬಯಸುವುದು ಜಾನಪದರ ಕಾಯಕವಾಗಿದೆ.
3. ಜಾನಪದ ಸಾಹಿತ್ಯಗಳಿಂದ ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಹಲವಾರು ಮೌಲ್ಯಗಳನ್ನು ಬೆಳೆಸಲು ಸಹಾಯಕವಾಗುತ್ತವೆ.
4. ಜಾನಪದ ಸಾಹಿತಿಗಳಿಂದ ನ್ಯಾಯ, ನೀತಿ, ಸತ್ಯ, ಧರ್ಮ, ಪ್ರೀತಿ ಇನ್ನು ಮುಂತಾದ ಪರಮೋಚ್ಚ ಮೌಲ್ಯಗಳನ್ನು ಇಂದಿನ ಶಿಕ್ಷಣದಲ್ಲಿ ಅಳವಡಿಸಬಹುದಾಗಿದೆ.
5. ಜಾನಪದ ಸಾಹಿತ್ಯದಿಂದ ಶಿಕ್ಷಣ ವ್ಯವಸ್ಥೆಯಲ್ಲಿ ಸರ್ವ ಸಮಾನತೆಯ ತತ್ವವನ್ನು ಜೀವನದಲ್ಲಿ ಅಳವಡಿಸಿಕೋಳ್ಳಲು ಸಹಾಯಕವಾಗಿವೆ.
6. ವಿಶ್ವಮಾನವತೆಯ ಸಂದೇಶ ಸಾರಿ ಇಂದಿನ ಶಿಕ್ಷಣದ ದಿಕ್ಸೂಚಿಯನ್ನ ನಿರ್ಮಾಣ ಮಾಡಿಕೊಟ್ಟವರು ಜಾನಪದರು.
7. ದಯೆ, ಕರುಣೆ, ಪ್ರಾಣಿದಯೆ, ಸಹಿಷ್ಣುತೆ, ಮೈತ್ರಿ, ಇನ್ನು ಮುಂತಾದ ಸದ್ಗುಣಗಳನ್ನು ಮಕ್ಕಳಲ್ಲಿ ಬೆಳಸಲು ಮತ್ತು ಇಂದಿನ ಶಿಕ್ಷಣದಲ್ಲಿ ಅಳವಡಿಸಲು ಸಾಧ್ಯ.
8. ಜಾನಪದರು ಮಾಡಿದ ಸೇವೆ ಸಮಸ್ತ ಮಾನವ ಕುಲಕೋಟಿಯ ಒಗ್ಗಟ್ಟಿನ ಭಾವನೆಯನ್ನು ಮೂಡಿಸುತ್ತದೆ.
9. ಜಾನಪದರು ಗುರುತಿಸಿದ್ದ ಸಾಮಾಜಿಕ ನ್ಯಾಯ ಭಾವನೆ ಹಾಗೂ ಸೇವಾ ಮನೋಭಾವನೆಗಳನ್ನು ಪಠ್ಯಕ್ರಮ ರಚನಾಕಾರರು ಗಮನದಲ್ಲಿರಿಸಿಕೊಳ್ಳಬೇಕೆಂದು ಸೂಚಿಸುತ್ತದೆ.
10. ಸಮಸ್ತ ಮಾನವ ಕುಲದ ಚಾರಿತ್ರ್ಯದ ವೈಶಿಷ್ಟ್ಯತೆಯನ್ನು ಎತ್ತಿ ಹಿಡಿದು ಸಮಾಜದ ಗಮನವನ್ನು ಸೆಳೆಯುತ್ತವೆ. 14. ಆಧಾರ ಗ್ರಂಥಗಳು


11. ಬಿಳಿಮಲೆ ಪುರುಷೋತ್ತಮ (1993) ಜಾನಪದ ಕ್ಷೇತ್ರ ಕಾರ್ಯ ಆಧುನಿಕ ವಿಧಾನಗಳು. ಹಂಪಿ: ಕನ್ನಡವಿಶ್ವವಿದಾಲಯ ಪ್ರಸಾರಾಂಗ.
12. ಗೋರೂರು ರಾಮಸ್ವಾಮಿ ಅಯ್ಯಂಗಾರ (1952) ಹಳ್ಳಿಯ ಹಾಡುಗಳು, ಗೋರೂರು, ರಾಮಚಂದ್ರ ಸ್ಮಾರಕ (ಸಂ).
13. ಕೃಷ್ಣಕುಮಾರ, ಸಿ.ಪಿ (1975) ಜಾನಪದ ಪ್ರತಿಭೆ. ಮೈಸೂರು: ತ.ವೆಂ. ಗರಂಥಮಾಲೆ.
14. ಕಂಬಾರ ಚಂದ್ರಶೇಖರ (1980) ನಮ್ಮ ಜಾನಪದ, ಬೆಂಗಳೂರು: ಅಭಿಜಾತ ಪ್ರಕಾಶನ.
15. ಮಾಸ್ತಿ ವೆಂಕಟೇಶ ಅಯ್ಯಂಗಾರ (1937) ಕರ್ನಾಟಕ ಜನಪದ ಸಾಹಿತ್ಯ ಮೈಸೂರು: ವೆಸ್ಲಿಪ್ರಸ್ ಪಬ್ಲಿಸಿಂಗ ಹೌಸ.
16. ಮಲ್ಲಾಪುರ, ಪಿ. ವ್ಹಿ. (1970) ಜನಪದ ಕಾವ್ಯದಲ್ಲಿ ಜೀವನ ಧರ್ಮ, ಧಾರವಾಡ:ಕರ್ನಾಟಕ ವಿಶ್ವವಿದ್ಯಾಲಯ, ಕ.ವಿ.ವಿ. ಉಪನ್ಯಾಸ ಗ್ರಂಥಮಾಲೆ.
17. ನಾಯಕ, ಎನ್. ಆರ್. (1989) ಉತ್ತರಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗಗಳ ಜಾನಪದ.ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕ.ವಿ.ವಿ. ಪ್ರಸಾರಾಂಗ ಉಪನ್ಯಾಸ ಗ್ರಂಥಮಾಲೆ.
18. ನಾಯಕ ಹಾರೋಗದ್ದೆ ಮಾನಪ್ಪ (ಸಂ) ಕನ್ನಡ ಜಾನಪದ ಗ್ರಂಥ ಸೂಚಿ, ಮೈಸೂರು:ಮೈಸೂರು ವಿಶ್ವವಿದ್ಯಾಲಯ.